ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ಸಂಖ್ಯೆ: ಕವಿಪ್ರನಿನಿ/ಕ.ಘ/ಸ/20510/2015-16**
**ಲಗತ್ತು: ನಮೂನೆ-01 ಮತ್ತು 02**

ದಿನಾಂಕ : 06 OCT 2020

ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾ.ಸಂ), ಬೆವಿಕಂ/ಮಂವಿಸಕಂ/ಗುವಿಸಕಂ /ಹುವಿಸಕಂ/ ಚಾವಿಸನಿ,
ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬೆಂಗಳೂರು/ ತುಮಕೂರು/ ಹಾಸನ/ ಗುಲ್ಬರ್ಗಾ/ ಬಾಗಲಕೋಟೆ/ ಮೈಸೂರು,
ಮುಖ್ಯ ಇಂಜಿನಿಯರ್, ಎಸ್‌ಎಲ್‌ಡಿಸಿ, ಬೆಂಗಳೂರು

ಮಾನ್ಯರೆ,

**ವಿಷಯ** **ನಿಗಮ ಮಂಡಳಿಗಳ ನೇಮಕಾತಿ ನಿಯಮಗಳು ಹಾಗೂ ಖಾಯಂ, ಗುತ್ತಿಗೆ, ಹೊರಗುತ್ತಿಗೆ ಅಧಿಕಾರಿ/ನೌಕರರ ಕ್ರೋಢೀಕೃತ ಮಾಹಿತಿ ಕೋರಿ**

ಉಲ್ಲೇಖ
1. ಅಧ್ಯಕ್ಷರು, ಕನ್ನಡ ಅಭಿವೃದ್ಧಿಪ್ರಾಧಿಕಾರ ರವರ ಪತ್ರ ಸಂಖ್ಯೆ: ಸಂ.ಕ.ಅ.ಪ್ರಾ/ಅ/69/2020 ದಿನಾಂಕ: 12.06.2020
2. ನಿಗಮದ ಪತ್ರ ಸಂಖ್ಯೆ:ಕವಿಪ್ರನಿನಿ/ಕ.ಘ/ಸ/20510/2015-16 ದಿನಾಂಕ: 28.08.2020.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಉಲ್ಲೇಖದ ಪತ್ರದಂತೆ, ನಿಗಮ-ಮಂಡಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಖಾಯಂ, ಗುತ್ತಿಗೆ, ಹೊರಗುತ್ತಿಗೆ ಅಧಿಕಾರಿ/ನೌಕರರು ಎಷ್ಟು ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದಾರೆ. ಹಾಗೂ 10ನೇ ತರಗತಿಯಲ್ಲಿ ಒಂದು ಭಾಷೆಯಾಗಿ ಕನ್ನಡವನ್ನು ಅಭ್ಯಾಸ ಮಾಡಿರುವ ಬಗ್ಗೆ ಹಾಗೂ ನೇಮಕಾತಿ ನಿಯಮಗಳ ಮಾಹಿತಿಯನ್ನು ಉಲ್ಲೇಖದಲ್ಲಿ ಕೋರಲಾಗಿತ್ತು. ಆದರೆ ಎಲ್ಲಾ ವಿಭಾಗದವರು ವಿಭಿನ್ನ ಮಾದರಿಯಲ್ಲಿ ಮಾಹಿತಿಯನ್ನು ಸಲ್ಲಿಸುತ್ತಿದ್ದು, ಇದನ್ನು ಕ್ರೋಢೀಕರಿಸಲು ಸಾಧ್ಯವಾಗದಿರುವುದರಿಂದ, ನಿಮ್ಮ ಕಂಪನಿ/ವಲಯ/ವಿಭಾಗಗಳಿಂದಲೇ ಲಗತ್ತಿಸಿರುವ ನಮೂನೆ-01 ರಲ್ಲಿ ಸಂಗ್ರಹಿಸಿರುವ ಖಾಯಂ ಅಧಿಕಾರಿ/ನೌಕರರ ಮಾಹಿತಿಯನ್ನು ಕ್ರೋಢೀಕರಿಸಿ ನಿಗಮ ಕಾರ್ಯಾಲಯಕ್ಕೆ ಹಾರ್ಡ್ ಹಾಗೂ ಸಾಫ್ಟ್ ಪ್ರತಿ (Email: kannadaghatakakptcl@gmail.com) ಯನ್ನು ನುಡಿ-05e ಅಕ್ಷರ ಬಳಸಿ ಮಾಹಿತಿಯನ್ನು ದಿನಾಂಕ: 13.10.2020ರೊಳಗೆ ನಿಗಮಕ್ಕೆ ಸಲ್ಲಿಸುವುದು.

ಮುಂದುವರೆದು, ಗುತ್ತಿಗೆ, ಹೊರಗುತ್ತಿಗೆ ನೌಕರರ ಮಾಹಿತಿಯನ್ನು ಆಯಾ ಏಜೆನ್ಸಿಗಳಿಂದಲೇ ಪಡೆದು ನುಡಿ-05e ಅಕ್ಷರ ಬಳಸಿ ನಮೂನೆ-02 ರಲ್ಲಿ ಮತ್ತು ಸಂಗ್ರಹಿಸಿದ ಮಾಹಿತಿಯನ್ನು ಯಥಾವತ್ತಾಗಿ ಹಾರ್ಡ್ ಹಾಗೂ ಸಾಫ್ಟ್ ಪ್ರತಿ (Email: kannadaghatakakptcl@gmail.com)ಯಲ್ಲಿ ನಿಗಮಕ್ಕೆ ದಿನಾಂಕ: 13.10.2020ರೊಳಗೆ ಸಲ್ಲಿಸಲು ಸೂಚಿಸಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪತ್ರವನ್ನು ಮಾಹಿತಿಗಾಗಿ ಲಗತ್ತಿಸಿದೆ.

ನಿಮ್ಮ ವಿಶ್ವಾಸಿ

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ

## ಕ್ರೋಢೀಕೃತ ವರದಿಯ ನಮೂನೆ-01

### ನಿಗಮ ಮಂಡಳಿಗಳ ಖಾಯಂ, ಗುತ್ತಿಗೆ, ಹೊರಗುತ್ತಿಗೆ, ಅಧಿಕಾರಿ/ನೌಕರರ ಮಾಹಿತಿ

| ಕ್ರಮ ಸಂಖ್ಯೆ | ಕಚೇರಿ ವಿಳಾಸ ದೂರವಾಣಿ | ಅಧಿಕಾರಿ/ನೌಕರರ ಹೆಸರು | ಪದನಾಮ | ಕರ್ನಾಟಕದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದಾರೆ | 10ನೇ ತರಗತಿಯಲ್ಲಿ ಒಂದು ಭಾಷೆಯಾಗಿ ಕನ್ನಡ ಅಭ್ಯಾಸದ ಬಗ್ಗೆ ವಿವರ/ಇಲ್ಲದಿದ್ದಲ್ಲಿ ಇತರೆ ವಿವರ |
|---|---|---|---|---|---|
| | | | | | |

## ವರದಿಯ ನಮೂನೆ-02

### ನಿಗಮ ಮಂಡಳಿಗಳ ಗುತ್ತಿಗೆ, ಹೊರಗುತ್ತಿಗೆ, ಅಧಿಕಾರಿ/ನೌಕರರ ಏಜೆನ್ಸಿಗಳಿಂದ ಪಡೆದ ಮಾಹಿತಿ

| ಕ್ರಮ ಸಂಖ್ಯೆ | ಕಚೇರಿ ವಿಳಾಸ ದೂರವಾಣಿ | ಅಧಿಕಾರಿ/ನೌಕರರ ಹೆಸರು | ಪದನಾಮ | ನೌಕರಿ ವಿಧ [ಗುತ್ತಿಗೆ/ಹೊರಗುತ್ತಿಗೆ ನೌಕರರು] | ಕರ್ನಾಟಕದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದಾರೆ | 10ನೇ ತರಗತಿಯಲ್ಲಿ ಒಂದು ಭಾಷೆಯಾಗಿ ಕನ್ನಡ ಅಭ್ಯಾಸದ ಬಗ್ಗೆ ವಿವರ/ಇಲ್ಲದಿದ್ದಲ್ಲಿ ಇತರೆ ವಿವರ |
|---|---|---|---|---|---|---|
| | | | | | | |

1663

FTS No. 1438257

**ENERGY/117/CORD/2020-R-I-ENERGY SECRETARIAT**

**ಕರ್ನಾಟಕ ಸರ್ಕಾರ**

ಸಂಖ್ಯೆ: ಎನರ್ಜಿ 117 ಸಿಓಆರ್‌ಡಿ2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:0608.2020.

**ಇಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ,
ಬೆಂಗಳೂರು-1.

M. D.
24 AUG 2020
KPTCL

**ಇವರಿಗೆ:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸಬರಾಜು ಕಂಪನಿ, ಹುಬ್ಬಳ್ಳಿ.
7. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
8. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪವರ್ ಕಂಪನಿ ಲಿಮಿಟೆಡ್, ಬೆಂಗಳೂರು.
11. ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು.

DGM(P)

**ಮಾನ್ಯರೆ,**

ವಿಷಯ: ಕನ್ನಡ ಭಾಷೆಯನ್ನು ಆಡಳಿತದ ಎಲ್ಲಾ ಹಂತದಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ರವರ ಪತ್ರ ದಿನಾಂಕ:07.07.2020.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅ.ಸ.ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ. ರಾಜ್ಯದ ನಿಗಮ-ಮಂಡಳಿಗಳ ಉದ್ಯೋಗ ನೀತಿ-ನಿಯಮಗಳಿಗೆ ಸಂಬಂಧಿಸಿದಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಕೆಯಾದ ಲಿಖಿತ ಹಾಗೂ ಮೌಖಿಕ ದೂರುಗಳನ್ವಯ ದಿನಾಂಕ:21.04.2017 ಹಾಗೂ 10.08.2017 ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೇತೃತ್ವದಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಅಲ್ಲದೆ ಪ್ರತ್ಯೇಕವಾಗಿಯೂ ಕೂಡ ಕೆಲವೊಂದು ನಿಗಮ-ಮಂಡಳಿಗಳಿಗೆ ನೇರವಾಗಿ ಹೋಗಿ ಈ ಕುರಿತು ನಿರ್ದೇಶನಗಳನ್ನು ನೀಡಲಾಗಿದೆ. ಸದರಿ ಸಭೆಗಳಲ್ಲಿ ಚರ್ಚಿಸಿ ನಿರ್ಧರಿಸಿದಂತೆ ರಾಜ್ಯ ಸರ್ಕಾರದ ನಿಗಮ-ಮಂಡಳಿಗಳು ಖಾಯಂ ನೇಮಕಾತಿ, ಗುತ್ತಿಗೆ ಮತ್ತು ಹೊರಗುತ್ತಿಗೆ ನೇಮಕಾತಿ ಸಂದರ್ಭದಲ್ಲಿ

ಡಾ.ಸರೋಜಿನಿ ಮಹಿಷಿ ವರದಿಯನ್ವಯ ಶೇ.100 ಕ್ಕೆ 100 ರಷ್ಟು ಕನ್ನಡಗರಿಗೆ ಕಡ್ಡಾಯವಾಗಿ ಉದ್ಯೋಗಗಳನ್ನು ನೀಡುವಂತೆ ಸೂಚಿಸಲಾಗಿತ್ತು. ಆದಾಗ್ಯೂ, ಕೂಡ ನಿಗಮ-ಮಂಡಳಿಗಳು ಸರ್ಕಾರದ ನೇಮಕಾತಿ ನಿಯಮಗಳಿಗೆ ವಿರುದ್ಧವಾಗಿ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸುತ್ತಿರುವುದರಿಂದ, ಕನ್ನಡಿಗರ ಪಾಲಿನ ಉದ್ಯೋಗಗಳು ಅನ್ಯರಾಜ್ಯದವರ ಪಾಲಾಗುತ್ತಿವೆ. ಆದ್ದರಿಂದ, ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳನ್ವಯ ನಿಗಮ-ಮಂಡಳಿಗಳು ಕನ್ನಡಿಗರಿಗೆ ಮಾತ್ರ ಉದ್ಯೋಗಗಳನ್ನು ನೀಡುವ ನಿಟ್ಟಿನಲ್ಲಿ ಆಯಾ ನಿಗಮ-ಮಂಡಳಿಗಳ ನೇಮಕಾತಿ ನಿಯಮಗಳನ್ನು ಸೂಕ್ತ ರೀತಿಯಲ್ಲಿ ಬದಲಾಯಿಸಿ ಜಾರಿಗೆ ತರಲು ಸೂಚಿಸಿರುತ್ತಾರೆ.

ಆದ್ದರಿಂದ, ತಮ್ಮ ನಿಗಮ / ಮಂಡಳಿಗಳು ನೇಮಕಾತಿ ನಿಯಮಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಹಾಗೂ ಪ್ರಸ್ತುತ ನಿಗಮ ಮಂಡಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಖಾಯಂ, ಗುತ್ತಿಗೆ, ಹೊರಗುತ್ತಿಗೆ ಅಧಿಕಾರಿ / ನೌಕರರು ಎಷ್ಟು ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದಾರೆ. 10ನೇ ತರಗತಿಯಲ್ಲಿ ಒಂದು ಭಾಷೆಯಾಗಿ ಕನ್ನಡವನ್ನು ಅಭ್ಯಾಸ ಮಾಡಿರುವ ಬಗ್ಗೆ ಮಾಹಿತಿ ನೀಡುವಂತೆ ಕೋರಿರುವುದರಿಂದ, ನೇರವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಾಹಿತಿಯನ್ನು ಕಳುಹಿಸಿ ಸರ್ಕಾರಕ್ಕೆ ಅಧರ ಪ್ರತಿಯನ್ನು ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

N. mangalagowri 6/8

(ಎನ್. ಮಂಗಳಗೌರಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ.

06/08

ಟಿ.ಎಸ್. ನಾಗಾಭರಣ
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕಚೇರಿ: ಕೊಠಡಿ ಸಂಖ್ಯೆ ೨೦೬
೨ನೇ ಮಹಡಿ, ವಿಧಾನಸೌಧ,
ಬೆಂಗಳೂರು-೫೬೦ ೦೦೧
ದೂರವಾಣಿ: ೦೮೦-೨೨೨೫೬೩೬೫
೨೨೦೩೩೫೯೧

ಸಂ.ಕಅಪ್ರಾ/ಅ/140/೨೦೨೦ ದಿನಾಂಕ: ೦೭-೦೭-೨೦೨೦

ಮಾನ್ಯರೆ,

ಕನ್ನಡ ಭಾಷೆಯನ್ನು ರಾಜ್ಯದ ಆಡಳಿತದ ಎಲ್ಲ ಮಟ್ಟದಲ್ಲಿ ಅನುಷ್ಠಾನವಾಗುತ್ತಿರುವುದರ ಪರಿಶೀಲನೆಯೂ ಸೇರಿದಂತೆ ಕನ್ನಡ ಭಾಷೆ ಮತ್ತು ಕನ್ನಡ ಜನರ ಹಿತಾಸಕ್ತಿಯನ್ನು ಕಾನೂನಿನನ್ವಯ ಸಂರಕ್ಷಿಸುವ ಸಲುವಾಗಿ ರಾಜ್ಯ ಶಾಸನದ ಮೂಲಕ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿರುತ್ತದೆ.

ಕನ್ನಡ ಭಾಷೆಯನ್ನು ಆಡಳಿತದ ಎಲ್ಲ ಹಂತದಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಹೊರಡಿಸಿರುವ ಆದೇಶಗಳನ್ನು ರಾಜ್ಯ ಸರ್ಕಾರ ಮತ್ತು ಸ್ಥಳೀಯ ನಿಕಾಯಗಳ ಅಧಿಕಾರಿಗಳು ಮತ್ತು ನೌಕರರು ಉಲ್ಲಂಘಿಸಿದರೆ ಅಂತಹ ಉಲ್ಲಂಘನೆಯನ್ನು ಕರ್ತವ್ಯಲೋಪವೆಂದು ದಾಖಲಿಸಲು ಮತ್ತು ಅಂತಹವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಕ್ಕೆ ಸಲಹೆ ನೀಡಲು ಹಾಗೂ ರಾಜ್ಯ/ಕೇಂದ್ರ ಸರ್ಕಾರದ ಇಲಾಖೆಗಳು/ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಕಾರ ನೀಡಲಾಗಿದೆ. (ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1994ರ ನಿಯಮ 19).

ಕೇಂದ್ರ ಸರ್ಕಾರದ ವ್ಯಾಪ್ತಿಯ ಸಾರ್ವಜನಿಕ ಉದ್ದಿಮೆಗಳು, ಬ್ಯಾಂಕುಗಳು ಮತ್ತು ಇತರೆ ಸಂಸ್ಥೆಗಳಲ್ಲಿ ಕರ್ನಾಟಕದ ಜನರ ಉದ್ಯೋಗದ ಬಗ್ಗೆ ಇರುವ ವಾಸ್ತವ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಶ್ರೀಮತಿ ಮಾರ್ಗರೇಟ್ ಆಳ್ವಾ ಅವರ ಅಧ್ಯಕ್ಷತೆಯಲ್ಲಿ 1983ರಂದು ಸಮಿತಿಯೊಂದನ್ನು ರಚಿಸಲಾಗಿತ್ತು. ಡಾ.ಸರೋಜಿನಿ ಮಹಿಷಿ ಅವರ ಅಧ್ಯಕ್ಷತೆಯಲ್ಲಿ 1984ರಲ್ಲಿ ಸಮಿತಿಯನ್ನು ರಚಿಸಿ ಮೇಲ್ಕಂಡ ಸಮಿತಿಯ ಕಾರ್ಯವ್ಯಾಪ್ತಿಯನ್ನು ಖಾಸಗಿ ಉದ್ಯಮಗಳಿಗೂ ವಿಸ್ತರಿಸಲಾಗಿತ್ತು. ಡಾ.ಸರೋಜಿನಿ ಮಹಿಷಿ ಅವರ ಅಧ್ಯಕ್ಷತೆಯ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿ ಈಗಾಗಲೇ 34 ವರ್ಷಗಳು ಸಂದಿವೆ. ಕನ್ನಡ, ಕನ್ನಡಿಗ, ಕರ್ನಾಟಕವನ್ನು ಗಮನದಲ್ಲಿಟ್ಟುಕೊಂಡು ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದ ಮಹತ್ವದ ವರದಿ ಅದಾಗಿತ್ತು. ಈ 34 ವರ್ಷಗಳ ದೀರ್ಘಾವಧಿಯಲ್ಲಿ ರಾಜ್ಯದ ಹಾಗೂ ದೇಶದ ಬದುಕಿನಲ್ಲಿ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆದಾಗ್ಯೂ ಕನ್ನಡಿಗರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯಲ್ಲಿ ನಿರೀಕ್ಷಿಸಿದ ಪರಿವರ್ತನೆ ಕಂಡು ಬಂದಿಲ್ಲ. 2016ರಲ್ಲಿ ಸರ್ಕಾರ ಡಾ.ಸರೋಜಿನಿ ಮಹಿಷಿ ವರದಿಯ ಪುನರ್ ಪರಿಶೀಲನಾ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ಕೇಂದ್ರ, ರಾಜ್ಯ, ಸಾರ್ವಜನಿಕ ಉದ್ದಿಮೆ, ಖಾಸಗಿ, ಐಟಿ-ಬಿಟಿ ಕ್ಷೇತ್ರಗಳೂ ಒಳಗೊಂಡಂತೆ ಪುನರ್ ಪರಾಮರ್ಶಿಸಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಕರ್ನಾಟಕದಲ್ಲಿರುವ ಕೇಂದ್ರ ಉದ್ದಿಮೆಗಳಲ್ಲಿ, ಕಛೇರಿಗಳಲ್ಲಿ ಮತ್ತು ಇತರೆ ಕೈಗಾರಿಕೆಗಳಲ್ಲಿ ಕನ್ನಡೇತರರ ಪ್ರಾಬಲ್ಯ ಹೆಚ್ಚಾಗಿದೆ. ಈ ಬಗೆಯ ವಾತಾವರಣದಲ್ಲಿ ಕನ್ನಡಿಗರು ರಾಜ್ಯ ಸರ್ಕಾರದ ವ್ಯಾಪ್ತಿಯ ಕಛೇರಿಗಳಲ್ಲಿ ಹಾಗೂ ಸಾರ್ವಜನಿಕ ಉದ್ದಿಮೆಗಳ ಅಡಿಯಲ್ಲಿ ಬರುವ ಹತ್ತಾರು ನಿಗಮ-ಮಂಡಳಿಗಳ ಕಡೆಗೆ ಉದ್ಯೋಗ ನಿರೀಕ್ಷೆಯ ಆಶಾಭಾವನೆಯಿಂದ ನೋಡುತ್ತಾರೆ. ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಎನ್ನುವುದು ತೀರಾ ಸಹಜವಾದ ಬೇಡಿಕೆ. ಇಂದು ಇದು ವಿಶ್ವದಾದ್ಯಂತ ಕೇಳಿ ಬರುತ್ತಿರುವ ಕೂಗು. ಇದನ್ನು ಗಮನಿಸಿ ರಾಜ್ಯ ಸರ್ಕಾರ ಕನ್ನಡಿಗರಿಗೆ ಉದ್ಯೋಗದಲ್ಲಿ ಸೂಕ್ತ ಅವಕಾಶ ಸಿಗುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಗಳನ್ನು ಇಡುತ್ತಿದೆ. ಅಸ್ತಿತ್ವದಲ್ಲಿರುವ ನಿಗಮ, ಮಂಡಳಿಗಳು ಸ್ವಾಯತ್ತತೆಯನ್ನು ಹೊಂದಿದ್ದು, ಖಾಲಿ ಹುದ್ದೆಗಳ ನೇಮಕಾತಿಯ ಸಂದರ್ಭದಲ್ಲಿ ಭಿನ್ನ ಭಿನ್ನ ನೇಮಕಾತಿ ನಿಯಮಗಳನ್ನು ರೂಪಿಸಿಕೊಂಡು ನೇಮಕಾತಿ ಪ್ರಕ್ರಿಯೆಯನ್ನು ನಡೆಸುತ್ತಿವೆ. ಬಹಳಷ್ಟು ಸಂದರ್ಭಗಳಲ್ಲಿ ಅವುಗಳ ನೇಮಕಾತಿ ನಿಯಮಗಳು ಸ್ಥಳೀಯರಿಗೆ ಮಾರಕವಾದಂತೆ ಅನ್ಯರಾಜ್ಯದವರು ಸುಲಭವಾಗಿ ಉದ್ಯೋಗಗಳನ್ನು ಪಡೆಯುವಲ್ಲಿ ಪೂರಕ

2..

ಇ-ಮೇಲ್: chairman.kanpra@gmail.com, ವೆಬ್‌ಸೈಟ್: www.kannada-praadhikaara.gov.in

ಟಿ.ಎಸ್. ನಾಗಾಭರಣ
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕಚೇರಿ: ಕೊಠಡಿ ಸಂಖ್ಯೆ ೨೦೬
೨ನೇ ಮಹಡಿ, ವಿಧಾನಸೌಧ,
ಬೆಂಗಳೂರು-೫೬೦ ೦೦೧
ದೂರವಾಣಿ: ೦೮೦-೨೨೨೫೬೬೬೫
೨೨೦೩೩೫೧೯



**ವಾತಾವರಣವನ್ನು ಸೃಷ್ಟಿಸುತ್ತಿವೆ. ಇದಕ್ಕೆ ಕೆಪಿಟಿಸಿಎಲ್, ಬೆಂಗಳೂರು ಜಲಮಂಡಳಿ ಹಾಗೂ ಜಂಗಲ್ ರೆಸಾರ್ಟ್‌ಗಳಂತಹ ಸಂಸ್ಥೆಗಳು ಜ್ವಲಂತ ಸಾಕ್ಷಿಯಾಗಿವೆ. ಇದು ಈ ನೆಲದ ಉದ್ಯೋಗ ಕಾನೂನಿಗೆ ವಿರುದ್ಧವಾದ ನಡೆಯಾಗಿರುತ್ತದೆ.**

ರಾಜ್ಯದ ನಿಗಮ-ಮಂಡಳಿಗಳ ಉದ್ಯೋಗ ನೀತಿ-ನಿಯಮಗಳಿಗೆ ಸಂಬಂಧಿಸಿದಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಕೆಯಾದ ಲಿಖಿತ ಹಾಗೂ ಮೌಖಿಕ ದೂರುಗಳನ್ವಯ ದಿನಾಂಕ:21-04-2017 ಹಾಗೂ 10-08-2017ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೇತೃತ್ವದಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಅಲ್ಲದೆ ಪ್ರತ್ಯೇಕವಾಗಿಯೂ ಕೂಡ ಕೆಲವೊಂದು ನಿಗಮ-ಮಂಡಳಿಗಳಿಗೆ ನೇರವಾಗಿ ಹೋಗಿ ಈ ಕುರಿತು ನಿರ್ದೇಶನಗಳನ್ನು ನೀಡಲಾಗಿದೆ. ಸದರಿ ಸಭೆಗಳಲ್ಲಿ ಚರ್ಚಿಸಿ ನಿರ್ಧರಿಸಿದಂತೆ ರಾಜ್ಯ ಸರ್ಕಾರದ ನಿಗಮ-ಮಂಡಳಿಗಳು ಖಾಯಂ ನೇಮಕಾತಿ, ಗುತ್ತಿಗೆ ಮತ್ತು ಹೊರಗುತ್ತಿಗೆ ನೇಮಕಾತಿ ಸಂದರ್ಭದಲ್ಲಿ ಡಾ.ಸರೋಜಿನಿ ಮಹಿಷಿ ವರದಿಯನ್ವಯ ಶೇ.100ಕ್ಕೆ 100ರಷ್ಟು ಕನ್ನಡಿಗರಿಗೆ ಕಡ್ಡಾಯವಾಗಿ ಉದ್ಯೋಗಗಳನ್ನು ನೀಡುವಂತೆ ಸೂಚಿಸಲಾಗಿತ್ತು. ಆದಾಗ್ಯೂ ಕೂಡ ನಿಗಮ-ಮಂಡಳಿಗಳು ಸರ್ಕಾರದ ನೇಮಕಾತಿ ನಿಯಮಗಳಿಗೆ ವಿರುದ್ಧವಾಗಿ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸುತ್ತಿರುವುದರಿಂದ ಕನ್ನಡಿಗರ ಪಾಲಿನ ಉದ್ಯೋಗಗಳು ಅನ್ಯರಾಜ್ಯದವರ ಪಾಲಾಗುತ್ತಿವೆ. ಆದ್ದರಿಂದ ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳನ್ವಯ ನಿಗಮ-ಮಂಡಳಿಗಳು ಕನ್ನಡಿಗರಿಗೆ ಮಾತ್ರ ಉದ್ಯೋಗಗಳನ್ನು ನೀಡುವ ನಿಟ್ಟಿನಲ್ಲಿ ಆಯಾ ನಿಗಮ-ಮಂಡಳಿಗಳ ನೇಮಕಾತಿ ನಿಯಮಗಳನ್ನು ಸೂಕ್ತ ರೀತಿಯಲ್ಲಿ ಬದಲಾಯಿಸಿ ಜಾರಿಗೆ ತರಲು ಸೂಚಿಸಿದೆ.

**ಎಲ್ಲಾ ನಿಗಮ ಮಂಡಳಿಗಳು ನೇಮಕಾತಿ ನಿಯಮಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಹಾಗೂ ಪ್ರಸ್ತುತ ನಿಗಮ ಮಂಡಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಖಾಯಂ, ಗುತ್ತಿಗೆ, ಹೊರಗುತ್ತಿಗೆ ಅಧಿಕಾರಿ/ನೌಕರರು ಎಷ್ಟು ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದಾರೆ. 10ನೇ ತರಗತಿಯಲ್ಲಿ ಒಂದು ಭಾಷೆಯಾಗಿ ಕನ್ನಡವನ್ನು ಅಭ್ಯಾಸ ಮಾಡಿರುವ ಬಗ್ಗೆ ಮಾಹಿತಿ ನೀಡುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿದೆ.**

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ**

**(ಟಿ ಎಸ್ ನಾಗಾಭರಣ)**

**ಗೆ,**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
**ಇಂಧನ ಇಲಾಖೆ,**
**ಅಧ್ಯಕ್ಷರು,**
**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ,**
**ಬೆಂಗಳೂರು.**